**1331 (1528) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ)** : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಜಿ ಸೈನಿಕ ಮತ್ತು ಅವರ ಅವಲಂಬಿತರ ವ್ಯಂದ ಹೆಚ್ಚಾಗಿರುವ ಜಿಲ್ಲಾ ಕಛೇರಿಗಳಾದ ಬಿಜಾಪೂರ, ಮಡಿಕೇರಿಯಲ್ಲಿರುವ ಉಪ ನಿರ್ದೇಶಕರ ಹುದ್ದೆಗಳನ್ನು ಜಂಟಿ ನಿರ್ದೇಶಕರ ಹುದ್ದೆಗಳಾಗಿ ಮೇಲ್ದರ್ಜೆಗೇರಿಸಿದ್ದು ಸರ್ಕಾರದ ಗಮನದಲ್ಲಿಯೇ?

ಆ) ಹಾಗಿದ್ದಲ್ಲಿ ಮಡಿಕೇರಿ ಜಂಟಿ ನಿರ್ದೇಶಕರ ಕಾರ್ಯಾಲಯವನ್ನು ಮಡಿಕೇರಿಯಿಂದ ಯಾವ ಕಾರಣಕ್ಕೆ ಬೆಂಗಳೂರಿಗೆ ಸ್ಥಳಾಂತರಿಸಲಾಗಿದೆ?

ಇ) ಬೆಂಗಳೂರಿನಲ್ಲಿರುವ ಕೇಂದ್ರ ಸ್ಥಾನದಲ್ಲಿ ಎಲ್ಲಾ ಅಧಿಕಾರಿಗಳು ಇಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದು ಇವರನ್ನು ಬೇರೆ ಜಿಲ್ಲೆಗಳಿಗೆ ಮಾಜಿ ಸೈನಿಕ ಜಿಲ್ಲಾ ಕಛೇರಿಗಳಿಗೆ ಕಾರ್ಯ ನಿರ್ವಹಿಸಲು ನಿಯೋಜಿಸಲಾಗುವುದೇ?

ಈ) ಹಾಗಿದ್ದಲ್ಲಿ, ಯಾವಾಗ ಮತ್ತು ಯಾವ ಯಾವ ಜಿಲ್ಲೆಗೆ ನಿಯೋಜಿಸಲಾಗುವುದು?

**ಶ್ರೀ ಎಂ.ಪಿ.ಪ್ರಕಾಶ್ (ಗೃಹ ಸಚಿವರು)** :

ಅ) ಹೌದು.

ಆ) ಬೆಂಗಳೂರಿನ ಸೈನಿಕ ಕಲ್ಯಾಣ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಕಾರ್ಯದ ಒತ್ತಡವು ಹೆಚ್ಚಾಗಿದ್ದರಿಂದ ಜಂಟಿ ನಿರ್ದೇಶಕರ ಹುದ್ದೆಯ ಅವಶ್ಯಕತೆ ಇದ್ದುದರಿಂದ ಮಡಿಕೇರಿಯ ಜಂಟಿ ನಿರ್ದೇಶಕರ ಹುದ್ದೆಯನ್ನು ಸರ್ಕಾರಿ ಆದೇಶ ಸಂ:ಒಇ 117 ಕಸೈಸೇ 2003, ದಿನಾಂಕ: 4–2–2004 ರಲ್ಲಿ ಬೆಂಗಳೂರಿನ ಕೇಂದ್ರ ಕಚೇರಿಗೆ ಸ್ಥಳಾಂತರಿಸಲಾಗಿತ್ತು. ಮಡಿಕೇರಿಯ ಕಾರ್ಯಾಲಯವನ್ನು ಸ್ಥಳಾಂತರಿಸಲಾಗಿಲ್ಲ.

ಇ) ಇಲಾಖೆಯ ಕೇಂದ್ರ ಸ್ಥಾನದಲ್ಲಿ 3 ಅಧಿಕಾರಿಗಳ ಹುದ್ದೆಗಳಿದ್ದು ಸದ್ಯಕ್ಕೆ ಈ ಪೈಕಿ ಕೇವಲ 2 ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಅಧಿಕಾರಿಗಳ ತೀವ್ರ ಕೊರತೆಯಿರುವುದರಿಂದ ಜಿಲ್ಲಾ ಕಛೇರಿಗಳಿಗೆ ನಿಯೋಜಿಸಲು ಸಾಧ್ಯವಾಗುವುದಿಲ್ಲ.

ಈ) ಅನ್ವಯಿಸುವುದಿಲ್ಲ.